(ಈ ನಿಟ್ಟಿನಲ್ಲಿ ವಿರೋಧಪಕ್ಷದ ನಾಯಕರೊಂದಿಗೆ ಎಲ್ಲ ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಗಮನ ಸೆಳೆಯುವ ಸೂಚನೆ

ಸರೋಜಿನಿ ಮಹಿಷಿಯವರ ಸಮಿತಿಯು ವರದಿ ಮತ್ತು ಶಿಫಾರಸ್ಸುಗಳು

ಶ್ರೀ ಆರ್ ವೆಂಕಟರಾಮಯ್ಯ (ಮುಳಬಾಗಿಲು).—ಸರೋಜಿನಿ ಮಹಷಿಯವರ ಸಮಿತಿಯು ಸರ್ಕಾರಕ್ಕೆ ಕೊಟ್ಟ ವರದಿ ಹಾಗೂ ಶಿಫಾರಸುಗಳ ಮೇರೆಗೆ ಸರ್ಕಾರದವರು ಕೈಗೊಂಡ ತೀರ್ಮಾನದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆ ನೀಡ ಬಯಸುತ್ತೇನೆ.

ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿ ಮತ್ತು ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಇರುವ ಉದ್ಯೋಗಾವಕಾಶದ ವಾಸ್ತವಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಈ ಸಂಸ್ಥೆಗಳಲ್ಲಿರುವ ಕರ್ನಾಟಕದ ನೌಕರರ ಸಮಸ್ಯೆ ಹಾಗೂ ಕೊರತೆಗಳನ್ನು ವಿಚಾರಿಸಿ ತಿಳಿದು ಅವುಗಳಿಗೆ ಪರಿಹಾರ ಒದಗಿಸುವ ಸೂಕ್ತ ಶಿಫಾರಸುಗಳನ್ನು ಮಾಡಲು ಸರ್ಕಾರವು ದಿನಾಂಕ ೪-೮-೮೩ ರಂದು ಡಾ॥ ಸರೋಜಿನಿ ಮಹಿಶಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ದಿನಾಂಕ ೨೫-೧-೮೪ ರಂದು ಅಸ್ತಿತ್ವಕ್ಕೆ ಬಂದು ದಿನಾಂಕ ೧೩-೬-೮೪ ರಂದು ಒಂದು ಮಧ್ಯಕಾಲೀಕ ವರದಿಯನ್ನು ಸಲ್ಲಿಸಿತು.

ಮಧ್ಯಕಾಲಿಕ ವರದಿಯಲ್ಲಿರುವ ೭ ಶಿಫಾರಸ್ಸುಗಳನ್ನು ಸರ್ಕಾರವು ಅಂಗೀಕರಿಸಿದೆ ಮತ್ತು ಸಂಬಂಧಪಟ್ಟ ಇಲಾಖೆ ಸೂಕ್ತ ಆದೇಶವನ್ನು ಹೊರಡಿಸಿವೆ.

ದಿನಾಂಕ ೨೮-೬-೮೫ ರಂದು ಸಮಿತಿಯು ಕಾರ್ಯವ್ಯಾಪ್ತಿಯನ್ನು ಖಾಸಗಿ ಉದ್ಯಮಗಳಿಗೂ ಸಹ ವಿಸ್ತರಿಸಲಾಯಿತು. ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಡಿಸಿದ ವಿಷಯಗಳು (ಟರ್ಮ್ಸ್ ಆಫ್ ರೆಫರೆನ್ಸ್) ಹಾಗೂ ಅಧ್ಯಯನ ಕ್ಷೇತ್ರವು ಬಹಳ ಗಹನ, ವಿಸ್ತಾರ ಮತ್ತು ತೀವ್ರತರವಾಗಿದ್ದುದರಿಂದ ಸಮಿತಿಯು ಆಳವಾದ ಅಧ್ಯಯನ ನಡೆಸಿ ತನ್ನ ಅಂತಿಮ ವರದಿಯನ್ನು ದಿನಾಂಕ ೩೧-೧೨-೮೬ ರಂದು ಸರ್ಕಾರಕ್ಕೆ ಸಲ್ಲಿಸಿದೆ.

ಅಂತಿಮ ವರದಿಯಲ್ಲಿ ೫೮ ಶಿಫಾರಸುಗಳಿವೆ. ಇವುಗಳಲ್ಲಿ ಕೆಲವು ಶಿಫಾರಸುಗಳನ್ನು ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ ಅನುಷ್ಠಾನಕ್ಕೆ ತರಬೇಕಾಗುತ್ತದೆ. ಕೆಲವು ಶಿಪಾರಸ್ಸುಗಳು ಗಹನ ಮತ್ತು ಕ್ಲಿಷ್ಟಕರವಾಗಿರುವುದರಿಂದ ಅವುಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಇನ್ನೂ ಕಾಲಾವಕಾಶ ಬೇಕು. ಸಮಿತಿಯು ಮಾಡಿರುವ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ಇರುವ ಸಾಧಕ ಭಾದಕಗಳನ್ನು ಪರೀಕ್ಷಿಸಲು ಸಂಬಧಪಟ್ಟ ಇಲಾಖೆಗಳೊಡನೆ ಸಮಾಲೊಚಿಸಲಾಗುತ್ತಿದೆ. ಆ ಇಲಾಖೆಗಳು ಸಲ್ಲಿಸುವ ವರದಿಯನ್ನು ಆದರಿಸಿ ಸರ್ಕಾರವು ಅಂತಿಮ ನಿರ್ಣಯವನ್ನು ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು.

ಶ್ರೀ ಆರ್, ವೆಂಕಟರಾಮಯ್ಯ.—ಈಗ ಇಂಡಿಯಾ ದೇಶದಲ್ಲಿ ದೊಡ್ಡಗಲಾಟೆ ನಡೆಯುತ್ತಿದೆ. ಎಲ್ಲಿ ನೋಡಿದರೂ ವಿಚ್ಛಿದ್ರಕಾರಕ ಶಕ್ತಿಗಳು ತಾಂಡವಾಡುತ್ತಿವೆ. ಪಂಜಾಬಿನಲ್ಲಿ ಚಳುವಳಿ ನಡೆಯುತ್ತಿವೆ, ಖಲಿಸ್ತಾನದಲ್ಲಿ ನಡೆಯುತ್ತಿದೆ. ಇಂಥಸಂದರ್ಭಗಳಲ್ಲಿ ಮಹಿಷಿಯವರ ವರದಿ ಬಂದಿದ್ದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ನಮಗೆ ಆದನ್ನು ಇನ್ನೂ ಒದಗಿಸಿಲ್ಲ. ಆದರಲ್ಲಿ ಸ್ಪಷ್ಟವಾಗಿ ಒಂದು ಭಾಷೆ ಬಗ್ಗೆ ಅಭಿಮಾನ ಕೆರಳಿಸಿ ರಾಷ್ಟ್ರದ ವಿಚ್ಛಿದ್ರಕಾರಕ ಶಕ್ತಿಗಳು ಏನಿವೆ ಅವುಗಳಿಗೆ ಎನ್‌ಕರೇಜ್‌ಮೆಂಟ್ ಕೊಟ್ಟಿಂತಾಗಿದೆ. ಇಂಡಿಯನ್ ಕಾನ್‌ಸ್ಟಿಟ್ಯೂಷನ್‌ನಲ್ಲಿ ಆರ್ಟಿಕಲ್ ೧೬ ಈ ರೀತಿ ಹೇಳುತ್ತದೆ.

" Equality of opportunity in matters of public employment—

(1) There shall be eqauality of opportunity for all citizens in matters relating to employment or opointment to any office under the State.

(2) No citizen shall, on grounds only of religion, caste, race, sex descent place of birth, residence or any of them be intiligible for or discriminated against against in respect of any employment or office under the State. ''

ಮಹಿಷಿಯವರ ಸಮಿತಿಯ ವರದಿಯನ್ನು ಪರಿಶೀಲಿಸಿದರೆ ಅದರಲ್ಲಿ ರೇಷಿಯೋ ಪರ್ಸಂಟೇಜ್ ಕೊಟ್ಟಿದ್ದಾರೆ. ಅದನ್ನು ಗಮನಕ್ಕೆ ತೆಗೆದುಕೊಂಡ ಪಕ್ಷದಲ್ಲಿ ೫ ಲಕ್ಷ ಪಾಪುಲೇಷನ್ ಬಾಂಬೆಯಲ್ಲಿದೆ. ಅಲ್ಲಿ ರತಕ್ಕ ಕನ್ನಡಿಗರ ಗತಿ ಏನು ಎಂದು ಯೋಚಿಸಬೇಕು, ಹೊಸೂರು ಫ್ಯಾಕ್ಟರಿಗಳ ಕಡೆ ೨೫ ಪರ್ಸೆಂಟ್ ಆದರೂ ಇದ್ದಾರೆ, ಅವರು ಅದೇ ರೀತಿ ಕನ್ನಡಿಗರನ್ನು ಅಪಾಯಿಂಟಮೆಂಟ್ ಮಾಡಬೇಕೆಂದರೆ ಅವರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಗಮನಿಸಬೇಕು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಟ್ರೇಡ್ ಯೂನಿಯನ್‌ನಲ್ಲಿ ಕಾರ್ಮಿಕನನ್ನು ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟಿ ಸಂಕುಚಿತ ಮನೋಭಾವವನ್ನು ಬೆಳಸಿದಂತಾಗುತ್ತದೆ. ಆದ್ದರಿಂದ ಇವರ ಅವಶ್ಯಕತೆ ಇರಲಿಲ್ಲವೆಂದು ಹೇಳುತ್ತೇನೆ. ಜನತಾ ಪಕ್ಷ ರಾಷ್ಟ್ರೀಯ ಪಕ್ಷ ಅದು ಕನ್ನಡ ಪಕ್ಷ ಅಲ್ಲ. ಈಗ ಮಹಿಷಿ ಸಮಿತಿಯ ವರದಿಯನ್ನು ಒಪ್ಪಿಕೊಂಡರೆ ಅದರಲ್ಲಿ ಬಹಳ ದೊಡ್ಡ ಅನಾಹುತ ಇದೆ, ಅದರಿಂದ ಹೊರನಾಡಿನಲ್ಲಿರತಕ್ಕ ಕನ್ನಡಿಗರಿಗೆ ತೊಂದರೆಯಾಗುತ್ತದೆ. ಇದನ್ನು ತಾವು ಗಮನಿಸಬೇಕು. ಇವರ ಹೇಳಿಕೆಯಲ್ಲಿ ಯಾವುದನ್ನೂ ಸ್ಪಷ್ಟಪಡಿಸಿಲ್ಲ. ಕೆಲವು ಶಿಫಾರಸ್ಸುಗಳನ್ನು ಒಪ್ಪಿಕೊಂಡಿದ್ದೇವೆಂದು ಹೇಳುತ್ತಾರೆ. ಯಾವ ಶಿಫಾರಸ್ಸುಗಳು ಎಂದು ಹೇಳಿಲ್ಲ. ೭ ಶಿಫಾರಸ್ಸುಗಳನ್ನು ಒದಿದ್ದೇವೆ, ೫೮ ಶಿಫಾರಸ್ಸುಗಳನ್ನು ಪರಿಶೀಲಿಸಿದ್ದೆವೆ, ಇಲಾಖೆಗಳ ಕಡೆ ಸಮಾಲೋಚಿಸುತ್ತಿದ್ದೆವೆ ಎಂದು ಹೇಳುತ್ತಿದ್ದಾರೆ. ಒಪ್ಪಿರುವ ೭ಶಿಫಾರಸ್ಸುಗಳಾವುವು ಎಂದು ಹೆಳಿದರೆ ಸ್ಪಷ್ಟತೆ ಇರುತ್ತಿತ್ತು. ಇವರ ಮನಸ್ಸಿನಲ್ಲಿರುವ ೫೮ ಶಿಫಾರಸ್ಸುಗಳು ಯಾವುವು ಎಂದು ಹೇಳಿದ್ದರೆ ಸ್ಪಷ್ಟತೆ ಇರುತ್ತಿತ್ತು, ಇಂಡಿಯಾದಲ್ಲಿರುವವರು ಭಾರತೀಯರೆಲ್ಲ ಕನ್ನಡಿಗರು ಅಂದರೆ ಆಂಧ್ರದವರು, ತಮಿಳುನಾಡಿನವರು ಆಗುತ್ತಿದ್ದರು ಯಾರು ದೇಶದ ರಾಷ್ಟ್ರದ ಐಕ್ಯತೆ ಬಗ್ಗೆ ಯೋಚಿಸುತ್ತಿಲ್ಲ. ಮಹಿಷಿ ಸಮಿತಿ ವರದಿಯನ್ನು ಒಪ್ಪಿಕೊಂಡರೆ ನಿಜವಾಗಿ ಕರ್ನಾಟಕದಲ್ಲಿ ಒಂದು ಸಂಕುಚಿತ ಮನೋಭಾವನೆಗೆ ಅವಕಾಶವಾಗುತ್ತದೆ. ನಾನು ಕೇಳಿಕೊಳ್ಳುವುದೆ ನೆಂದರೆ ಮಧ್ಯಕಾಲಿಕ ವರದಿಯ ಶಿಫಾರಸ್ಸುಗಳು ಏನಿವೆ ಅವುಗಳನ್ನು ವಾಪಸ್ ತೆಗೆದುಕೊಂಡು ಮೊದಲಿನಿಂದ ಯಾವರೀತಿ ಸೌಹಾರ್ದತೆಯಿಂದ ಕರ್ನಾಟಕದಲ್ಲಿ ಎಲ್ಲ ಜನಾಂಗಗಳು ಇದ್ದರು ಆ ರೀತಿ ಇರುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬುದು ನನ್ನ ಒಂದು ಅನಿಸಿಕೆ. ಆದ್ದರಿಂದ ಇದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು. ಆದನ್ನು ಬಿಟ್ಟು ಕಡೆಯವರೆಗೂ ಈ ವಿಚಾರ ತೆಗೆದುಕೊಂಡು ಹೋದರೆ ಅದರಿಂದ ಅನಾಹುತ ಜಾಸ್ತಿ. ನಾವು ಏನೇ ಮಾಡಿದರೂ ದೂರದೃಷ್ಟಿ ಇರಬೇಕು. ಮಹಾರಾಷ್ಟ್ರದಲ್ಲಿ ಶಿವಸೇನೆ ಇದೆ. ಅವರು ಕರ್ನಾಟಕದವರನ್ನೆಲ್ಲಾ ಬೊಂಬಾಯಿಯಿಂದ ಓಡಿಸಬೇಕು ಎಂದು ಹೇಳುತ್ತಾರೆ ಆದ್ದರಿಂದ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಏನೆಂದರೆ ವರದಿಯನ್ನು ವಾಪಸ್ ತೆಗೆದುಕೊಳ್ಳಬೇಕು, ಅದನ್ನು ಒಪ್ಪಿಕೊಳ್ಳಬಾರದು ಎಂದು.

ಶ್ರೀ ಎಂ.ಎಸ್. ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿರುವುದರಲ್ಲಿ ಎರಡು–ಮೂರು ಸಮಸ್ಯೆಗಳು ಬರುತ್ತವೆ. ಸರೋಜಿನಿ ಮಹಿಷಿ ವರದಿ ಇನ್ನೂ ನಮ್ಮ ಕೈಗೆ ಸೇರಿಲ್ಲ, ಸಿಕ್ಕಿದ್ದರೆ ಚೆನ್ನಾಗಿರುತ್ತಿತ್ತು. ಅದನ್ನು ಒದಗಿಸಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ಆದಷ್ಟು ಜಾಗ್ರತೆ ಒದಗಿಸಿದರೆ ಹೆಚ್ಚು ಅನುಕೂಲವಾಗುತ್ತದೆ. ಆದ್ದರಿಂದ ಒದಗಿಸುತ್ತಾರೋ ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಬೇಕು. ಎರಡನೆಯದು ಯಾವ ಶಿಫಾರಸ್ಸನ್ನು ಒಪ್ಪಿಕೊಂಡಿದ್ದಾರೆ ಎಂಬ ಬಗ್ಗೆ ತಿಳಿವಳಿಕೆ ಕೊಡಬೇಕು ಏಳು ಶಿಫಾರಸ್ಸುಗಳನ್ನು ಒಪ್ಪಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಮೂರನೆಯದಾಗಿ, ನಮ್ಮ ರಾಜ್ಯದಲ್ಲಿ ಯಾವುದೇ ಕೈಗಾರಿಕೆಗಳು ಬರಲಿ ಅದು ಎಲ್ಲಿ ಸ್ಥಾಪನೆಯಾಗುತ್ತದೋ ಅಂಥ ಪ್ರದೇಶದಲ್ಲಿರುವ ಜನರಿಗೆ ಅವಕಾಶ ಕೊಡಬೇಕು, ಉದ್ಯೋಗಕ್ಕೆ ಅವಕಾಶ ಕೊಡಬೇಕು ಎಂಬುದು ಸರಿಯಾದ ನಿಯಮ. ಅದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಕರ್ನಾಟಕದಲ್ಲಿ ಕೈಗಾರಿಕೆ ಬಂದರೆ ಇಲ್ಲಿರುವವರಿಗೆ ಉದ್ಯೋಗಾವಕಾಶ ಕೊಡಬೇಕು.

ತಮಿಳುನಾಡಿನಲ್ಲಿ ಬಂದರೆ, ಕೇರಳದಲ್ಲಿ ಬಂದರೆ ಅಲ್ಲಿ ಕೊಡುತ್ತಾರೆ. ಕನ್ನಡಿಗರಿಗೆ ಉದ್ಯೋಗಾವಕಾಶ ಕೊಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ ಕನ್ನಡಿಗರು ಎಂದರೆ ಯಾರು? ಆಧ್ಯತೆ ಎಂದರೆ ಯಾರಿಗೆ ಎಂಬ ಬಗ್ಗೆ ಯೋಚನೆ ಮಾಡಬೇಕು. ಆಧ್ಯತೆ ಎಂದರೆ, ಕೆಲವು ಕಡೆ ವಿನಾಗಿದೆ ನುರಿತಿಲ್ಲದ ಕಾರ್ಮಿಕರು, ನುರಿತಂಥ ಕಾರ್ಮಿಕರು, ಅರ್ಧ ನುರಿತಂಥ ಕಾರ್ಮಿಕರು ಎಂದಿರುತ್ತಾರೆ. ನುರಿತಿಲ್ಲದೇ ಇರುವ ಕಾರ್ಮಿಕರು ಎಂದರೆ ತೊಂದರೆಯಾಗಲಾರದು. ಆದರೆ ಅರ್ಧನುರಿತಂಥ ಕಾರ್ಮಿಕರು ಮತ್ತು ನುರಿತಂಥ ಕಾರ್ಮಿಕರ ಬಗ್ಗೆ ೮೦ ಪರ್ಸೆಂಟ್ ಕನ್ನಡಿಗರಿಗೆ ಕೊಡಬೇಕೆಂದು ಹೇಳಿದಾಗ ಅರ್ಧ ನುರಿತ ಕಾರ್ಮಿಕರು ಮತ್ತು ನುರಿತಂಥ ಕಾರ್ಮಿಕರ ಮಧ್ಯೆ ವೇಕೆನ್ಸಿ ಬಂದಾಗ ಅಂಥ ಕನ್ನಡಿಗರೇ ಇಲ್ಲದೇಹೋದರೆ ಬೇರೆಯವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲದೇ ಹೋದರೆ ಕೆಲಸ ನಡೆಯುವುದಿಲ್ಲ. ನಾನು ಅನೇಕ ಯೂನಿಯನ್‌ನಲ್ಲಿರುವುದರಿಂದ ಈ ತೊಂದರೆಗಳು ನನಗೆ ಗೊತ್ತಿದೆ. ಅದು ಆಗದಹಾಗೆ ನೋಡಿಕೊಳ್ಳಬೇಕು, ಕೆಲಸ ಸಸೂತ್ರವಾಗಿ ನಡೆಯಬೇಕು ಎಂಬುದು ಮುಖ್ಯವಾದುದು ಪ್ರಶ್ನೆ. ಎಲ್ಲಕ್ಕಿಂತ ಮುಖ್ಯವಾಗಿ ಶ್ರೀ ವೆಂಕಟರಾಮಯ್ಯನವರು ಹೇಳಿದಹಾಗೆ ಗೊಂದಲ ಉಂಟಾಗಬಾರದು. ಸಂವಿಧಾನಕ್ಕೆ ವಿರೋಧವಾಗಿ ಇರುವ ಶಿಫಾರಸ್ಸುಗಳೆಯೇ ಎಂಬ ಬಗ್ಗೆ ವೆರಿಫೈ ಮಾಡಬೇಕು. ವಿರೋಧವಾಗುವುದಿದ್ದರೆ ಖಂಡಿತವಾಗಿ ಆದನ್ನು ಒಪ್ಪಿಕೊಳ್ಳಬಾರದು. ಆದರಿಂದ ಇಲ್ಲೂ ತೊಂದರೆಯಾಗುತ್ತದೆ. ಕನ್ನಡಿಗರು ಹೊರನಾಡಿನಲ್ಲಿ ಏನಿದ್ದಾರೆ ಅವರಿಗೆ ಕೂಡ ತೊಂದರೆಯಾಗುತ್ತದೆ. ಯಾರಿಗೂ ತೊಂದರೆಯಾಗದಂತೆ ನೋಡಿಕೊಳ್ಳುವ ಸಮನ್ವಯ ತೀರ್ಮಾನ ಮಾಡಬೇಕು. ಸುಮ್ಮನೆ ಏನೋ ಕೊಟ್ಟಿದ್ದಾರೆ ಎಂದು ಎಲ್ಲ ಕನ್ನಡಿಗರಿಗೇ ಕೊಡಬೇಕೆಂಬ ಯೋಜನೆ ಮಾಡಿದರೆ, ಬೇರೆ ಕಡೆ ಕನ್ನಡಿಗರಿಗೆ ತಾಪತ್ರಯ ಆಗುವಹಾಗೆ ಮಾಡಿಕೊಂಡರೆ ಅದರಿಂದ ಮಹಾಪರಾಧವಾಗುತ್ತದೆಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಆಹಾರ ಮತ್ತು ಆರಣ್ಯ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವೆಂಕಟರಾಮಯ್ಯನವರು ಮತ್ತು ಕೃಷ್ಣನ್ ಅವರು ಈ ವಿಷಯದ ಮೇಲೆ ಮಾತನಾಡಿದ್ದಾರೆ.

ಶ್ರೀ ಎಂ.ಎಸ್. ಪಾಟೀಲ್.—ನನಗೆ ಉತ್ತರದ ಕಾಪಿ ಬಂದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ವೆಂಕಟರಾಮಯ್ಯನವರು ಒಳ್ಳೆಯ ತತ್ವ ಹೇಳಿದ್ದಾರೆ. ತತ್ವ ಹೇಳಿ ಕೊನೆಗೆ ಅನಿಸಿಕೆ ಎಂದು ಹೇಳಿದ್ದಾರೆ. ಅದು ಅವರ ಸ್ವಂತ ಅಭಿಪ್ರಾಯ. ಆದರೆ ಈ ರಾಜ್ಯದಲ್ಲಿ ಇರತಕ್ಕ ಅಭಿಪ್ರಾಯಗಳನ್ನೂ ಕೂಡಿ ಗಮನದಲ್ಲಿಟ್ಟುಕೊಂಡಿದ್ದೇವೆ. ಈ ರಾಜ್ಯದಲ್ಲೇ ಹುಟ್ಟಿ ಇಲ್ಲೇ ಬೆಳೆದು, ಕೈಗಾರಿಕೆಗಳು ಇಲ್ಲೇ ಸ್ಥಾಪನೆಯಾಗಿ ಇಲ್ಲಿನ ಶಕ್ತಿ, ಇಲ್ಲಿನ ಬಂಡವಾಳ, ಇಲ್ಲಿನ ಕೆಲಸಗಾರರು, ಆಮೇಲೆ ಇಲ್ಲಿಂದ ಸಾಲ ಸರ್ಕಾರದಿಂದ ಮತ್ತು ಹಣಕಾಸಿನ ಸಂಸ್ಥೆಗಳಿಂದ, ಇಷ್ಟೆಲ್ಲಾ ತೆಗೆದುಕೊಂಡು ಬೇರೆ ಊರಿನ ಬೇರೆ ರಾಜ್ಯದ ಜನರಿಗೆ ಕೆಲಸ ಕೊಟ್ಟರೆ ಸ್ಥಳೀಯವಾಗಿರತಕ್ಕ ಜನರಿಗೆ ಅವರ ಮನಸ್ಸಿಗೆ ಬೇಸರವನ್ನಿಸುತ್ತದೆ ಎಂಬುದನ್ನು ಅವರು ಯೋಚನೆ ಮಾಡಿದಹಾಗೆ ನನಗೆ ಕಾಣಿಸುವುದಿಲ್ಲ. ಸ್ವಲ್ಪ ಆಳವಾಗಿ ಈ ಪ್ರಶ್ನೆಯನ್ನು ತಾವು ವಿಚಾರ ಮಾಡಿದ್ದೇ ಆದರೆ ನನ್ನ ವಾದವನ್ನು ಸಂಪೂರ್ಣವಾಗಿ ತಾವು ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸುತ್ತೇನೆ. ವಿಚಿದ್ರಕಾರಕ ಶಕ್ತಿಗಳಿಗೆ ಅವಕಾಶ ಕೊಡುವುದಕ್ಕೆ ಕಾರಣ ಇಲ್ಲ. ಸಂವಿಧಾನಕ್ಕೆ ವಿರುದ್ಧವಾಗಿ ಹೋಗತಕ್ಕಂತಹ ಪರಿಸ್ಥಿತಿ ಇಲ್ಲ. ಮತ್ತು ಐಕ್ಯತೆಗೆ ವಿರುದ್ಧವಾಗಿ ಹೋಗತಕ್ಕಂತಹ ಪರಿಸ್ಥಿತಿ ಏನೂ ಆಗುವುದಿಲ್ಲ. ನಮ್ಮ ಮಾನೆಯಲ್ಲಿ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಕೆಲಸವನ್ನು ಪೂರಾ ಪರ್ಯಾಯವಿಂದ ಜೀವನ ಮಾಡುವುದಕ್ಕೆ ಅವಕಾಶ ಇರಬೇಕೇ ಬೇಡವೇ? ನಮ್ಮ ಮಾನೆಗೆ ಯಾರಾದರೂ ನೆಂಟರು ಬರುತ್ತಾರೆ ಅಂತ ಇಟ್ಟುಕೊಳ್ಳೋಣ. ಅವರು ಬಂದಾಗ ಚಾಪೆ ಹಾಕುತ್ತೇವೆ. ಕಾಫಿ ಕುಡಿಯಿರಿ ಅಂತ ಹೇಳುತ್ತೇವೆ. ತಿಂಡಿ ತಿನ್ನಿ ಅಂತ ಹೇಳುತ್ತೇವೆ. ನಂತರ ಊಟ ಮಾಡಿ ಅಂತಲೂ ಹೇಳುತ್ತೇವೆ. ಆದರೆ ಬಂದಂತಹ ನೆಂಟರು ಮನೆಯೇ ನಿಮ್ಮದಲ್ಲ ನೀವು ಹೊರಟು ಹೋಗಿ ಎನ್ನುವುದು ಯಾವ ದೇಶದಲ್ಲೂ ಆಗುವಾರದು. ಈ ಒಂದು ಪ್ರವೃತ್ತಿ ವಿಚಿದ್ರಕಾರಕ ಮನೋಭಾವನೆಗಳಿಗೆ ಅವಕಾಶ ಕೊಡಬಹುದು. ಆದ್ದರಿಂದ ಅದನ್ನು ತಪ್ಪಿಸಬೇಕು. ಸ್ಥಳೀಯವಾಗಿ ಇರತಕ್ಕಂತಹವರಿಗೆ ಕೆಲಸ ಮಾಡುವುದನ್ನು ಸಂವಿಧಾನದ ರೀತಿ ಅವಕಾಶಗಳನ್ನು ಕಲ್ಪಿಸಿಕೊಡತಕ್ಕಂತಹ ಸನ್ನಿವೇಶ ಎಲ್ಲರಲ್ಲೂ ಕಡಿಮೆಯಾಗಿದೆ. ಇಲ್ಲವೇ ಇಲ್ಲ ಎನ್ನತಕ್ಕಂತಹ ಜನ ಇದ್ದಾರೆ. ಇವೆಲ್ಲವನ್ನೂ ಪರಿಶೀಲನೆ ಮಾಡಿ ನ್ಯಾಯವನ್ನು ದೊರಕಿಸಿಕೊಡತಕ್ಕಂತಹ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎನ್ನುವ ದೃಷ್ಟಿಯಿಂದ ಈ ಒಂದು ಸಮಿತಿಯನ್ನು ರಿಪೋರ್ಟು ಮಾಡಿದ್ದು. ಆ ಸಮಿತಿ ತನ್ನ ಶಿಫಾರಸ್ಸುಗಳನ್ನು ಸರ್ಕಾರಕ್ಕೆ

ಕೊಟ್ಟಿದೆ. ನಾನು ಕೂಡ ಆ ಶಿಫಾರಸ್ಸುಗಳ ಸಂಖ್ಯೆಯನ್ನು ಓದಿದ್ದೇನೆ. ಪೂರ್ತಿಯಾಗಿ ಆ ವರದಿಯನ್ನು ನೋಡಿಲ್ಲ, ಅವುಗಳನ್ನು ಬೇಗ ಒದಗಿಸಿ ಕೊಡುವುದಕ್ಕೆ ಸಂಬಂಧಪಟ್ಟವರಿಗೆ ಹೇಳುತ್ತೇನೆ. ನನ್ನ ಹತ್ತಿರವೂ ಆ ವರದಿ ಇಲ್ಲ. ಆದ್ದರಿಂದ ಸನ್ಮಾನ್ಯ ವೆಂಕಟರಾಮಯ್ಯನವರು ವಾದವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ದಯವಾಡಿ ಇದರ ಬಗ್ಗೆ ಇನ್ನೂ ಚಿಂತನೆ ಮಾಡಬೇಕೆಂಬುದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಕೃಷ್ಣನ್‌ನವರು ಸ್ವಲ್ಪ ಪ್ರಾಗ್ಮಾಟಿಕ್ ಆಗಿ ಮಾತನಾಡಿದ್ದಾರೆ. ಭೂಮಿಗೆ ಇಳಿದು ಮಾತನಾಡಿದ್ದಾರೆ. ಕೆಲವು ಮೂಲಭೂತವಾದ ಸಮಸ್ಯೆಗಳು ಬಂದಾಗ ಅವುಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳೀಯರಿಗೆ ಅವಕಾಶ ಕೊಡಬೇಕು ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಮೂಲಭೂತವಾಗಿ ಭಾಷೆಯ ಬಗ್ಗೆ ರೀಜನಾಲಿಸಂ, ಅಥವಾ ಪ್ರಾದೇಶಿಕ ಭಾವನೆಗಳ ಬಗ್ಗೆ ಸನ್ನಿವೇಶವನ್ನು ಮಾಡಿಸುವಂತಹ ನಮ್ಮ ದೇಶದಲ್ಲಿ ಬಂದಿದ್ದು ಸ್ಥಳೀಯರಿಗೆ ಅವಕಾಶ ಇಲ್ಲದಂತಾಗಿದೆ. ಈ ಒಂದು ಅನುಭವದ ಹಿನ್ನೆಲೆಯಲ್ಲಿ ಸ್ವಲ್ಪವಾದರೂ ಬಂದಿದ್ದೇವೆ ಎನ್ನುವುದನ್ನು ನಾವು ಯಾರೂ ಮರೆಯಬಾರದು, ಎಂಬುದಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಗೊಂದಲವಾಗತಕ್ಕ ಪರಿಸ್ಥಿತಿ ಇದರಿಂದ ಆಗುವುದಿಲ್ಲ. ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಳ್ಳುವುದಕ್ಕೆ ಆವಕಾಶ ಇಲ್ಲ. ಸಂವಿಧಾನದ ಸಂಬಂಧಪಟ್ಟ ಕಾಲಂನ್ನು ನಾನೂ ಓದಿದ್ದೇನೆ. ನ್ಯಾಯವಾಗಿ ಮಣ್ಣಿನ ಮಕ್ಕಳಿಗೆ ಕಾನೂನು ಪ್ರಕಾರ ಸಂವಿಧಾನದ ಪ್ರಕಾರ ಒಳ್ಳೆಯ ಮರ್ಯಾದೆಯಿಂದ ಕೆಲಸ ಮಾಡುವುದಕ್ಕೆ ಹಾಗೂ ಜೀವನ ಮಾಡುವುದಕ್ಕೆ ಅವಕಾಶ ಇಲ್ಲದ ಪರಿಸ್ಥಿತಿಯನ್ನು ದೊಡ್ಡ ದೊಡ್ಡ ನಗರಗಳಲ್ಲಿ ನಾವುಗಳಿಲ್ಲರೂ ಕಾಣುತ್ತಿದ್ದೇವೆ. ಇದನ್ನು ಯಾರೂ ಮರೆಯುವ ಹಾಗೆ ಇಲ್ಲ. ದೊಡ್ಡ ದೊಡ್ಡ ಕಾರ್ಪಾನೆಗಳು ಬೆಂಗಳೂರು ನಗರದಲ್ಲಿ ಏನೇನು ಬಂದಿವೆ ಅಲ್ಲಿ ಇಲ್ಲಿನ ನಮ್ಮ ಸ್ಥಳೀಯ ಜನರಿಗೆ ಎಷ್ಟು ಸಿಕ್ಕಿವೆ, ಬೇರೆ ರಾಜ್ಯದ ಜನಗಳಿಗೆ ಎಷ್ಟು ಸಿಕ್ಕಿವೆ ಎಂಬುದನ್ನು ತಾವು ನೋಡಬೇಕಾಗಿದೆ. ನಾನು ಖಾಸಗೀ ಕೈಗಾರಿಕೆಗಳ ಬಗ್ಗೆ ಮಾತನಾಡುತ್ತಿಲ್ಲ. ಸರ್ಕಾರಿ ಸ್ವಾಮ್ಯತ್ವದಲ್ಲಿರತಕ್ಕ ಕೈಗಾರಿಕೆಗಳು. Semi-Government undertakings Governmental Undertakings, Central Government Undertakings, State Govt. Undertakings, Public and Private with 90% capital supplied by the Financial Institutions including LIC and Banks, Whose interest they are serving here? ಶೇಕಡಾ ೯೦ರಷ್ಟು ಹಣವನ್ನು ಎಲ್.ಐ.ಸಿ. ಹಾಗೂ ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡಿದ್ದಾರೆ. ಅದಕ್ಕೋಸ್ಕರ ಇದನ್ನು ದಯವಾಡಿ, ಭಾವನಾತ್ಮಕ ರೀತಿಯಲ್ಲಿ ಇದನ್ನು ತಿಳಿದುಕೊಳ್ಳಬಾರದು. ಸ್ಥಳೀಯರಿಗೆ ನ್ಯಾಯಸಮ್ಮತವಾಗಿ ಕೆಲಸ ಸಿಕ್ಕಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ನೀವು ಇಲ್ಲಿ ಮಾಡುತ್ತಿದ್ದೀರಿ. ಆದರೆ ಯಾರು ಕನ್ನಡಿಗರು ಇವತ್ತು ಹೊರಗಡೆ ಇದ್ದಾರೆ. ಅಂದರೆ ಬೊಂಬಾಯಿಯಲ್ಲಿ ೮ ಲಕ್ಷ ಕನ್ನಡಿಗರು ಇದ್ದಾರೆ. ೩ ಲಕ್ಷ ಕನ್ನಡಿಗರು ಮದ್ರಾಸ್‌ನಲ್ಲಿದ್ದಾರೆ. ಅದೇ ರೀತಿ ಆಂಧ್ರದಲ್ಲೂ ಇದ್ದಾರೆ. ಅವರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಇವನ್ನು ಮಾಡುತ್ತಿದ್ದೇವೆ. ಬೇರೆ ರೀತಿಯಲ್ಲಿ ಮಾಡಬೇಕೆಂಬ ಉದ್ದೇಶ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನ್ಯಾಷನಲ್ ಇಂಟಿಗ್ರಿಟಿ ಎಂಬುದಾಗಿ ಹೇಳಿದರೂ ಅದರಲ್ಲಿ ಮಣ್ಣಿನ ಮಕ್ಕಳು ಅಂತ ಎಲ್ಲಿದೆ ? ಇದೇನು ಕ್ಲಾಸ್–೩ ಹಾಗೂ ಕ್ಲಾಸ್–೪ ಅಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ದೇಶದ ಐಕ್ಯತೆ ಬಗ್ಗೆ ಮಾನ್ಯ ವೆಂಕಟರಾಮಯ್ಯನವರಲ್ಲಿ ಇರುವುದು ಬೇಡವೆಂದು ನಾನು ಹೇಳುವುದಿಲ್ಲ. ನನ್ನ ಮನೆಯಲ್ಲಿ ನಾನು ಇರುವುದು ಬೇಡ, ನನ್ನ ಮನೆಯಲ್ಲಿ ನೀನೇ ಇರು ಎನ್ನುವ ಭಾವನೆ ಅವರಲ್ಲಿ ಇದೆಯೆಂದು ಕಾಣುತ್ತದೆ. ಇದು ಜೀವನ ತತ್ವಕ್ಕೆ ವಿರುದ್ಧವಾಗಿದೆ. ನಾನು ಇದ್ದರೆ ವೆಂಕಟರಾಮಯ್ಯನವರು ಇರುತ್ತಾರೆ, ಕೃಷ್ಣನ್ ಅವರು ಇರುತ್ತಾರೆ, ರಾಚಯ್ಯನವರು ಇರುತ್ತಾರೆ. ನನ್ನನ್ನೇ ಗಂಟು ಬಿದ್ದಿದೆ ಎನ್ನುವುದು ಜೀವನ ನಡೆಸುವುದಕ್ಕೆ ವಿರುದ್ಧವಾದ ತತ್ವವಾಗುತ್ತದೆ. ನಾನು ಇದ್ದರೆ ಮಿಕ್ಕ ಎಲ್ಲರೂ ಇದೇ ತತ್ವ. ಕನ್ನಡ ಜನರಿಗೆ ನೀವು ಕೆಲಸ ಕೊಡಿರಪ್ಪ ಇಷ್ಟೇ ಹೇಳುವುದು. ಬೇರೆಯವರಿಗೆ ತೊಂದರೆ ಮಾಡಿ ಕೊಡಿ ಎಂದು ಹೇಳುವುದಿಲ್ಲ. ನಮ್ಮ ಪಾಲು ನಮಗೆ ಕೊಡಿ. ಪಂಡಿತರನ್ನು ಎಲ್ಲಿಂದ ಬೇಕಾದರೂ ತರೋಣ. ಸ್ಕಿಲ್ಡ್ ಲೇಬರರ್ಸ್ ನವ್ಮಲ್ಲಿ ಇಲ್ಲವೇ ? ಇವರನ್ನು ಅಪಾಯಿಂಟ್ ಮಾಡುವವರು ಯಾರು ? ಯು.ಪಿ.ಎಸ್.ಸಿ ನಲ್ಲಿ ಕರ್ನಾಟಕದ ರೆಪ್ರೆಸೆಂಟೇಟೀವ್ ಇಲ್ಲ ಎಂದು ಮಾನ್ಯ ದೇವೇಗೌಡರು ಹೇಳುತ್ತಿದ್ದರು. ಈ ರೀತಿ

ಎಲ್ಲಾ ಇದೆ. ಇದು ದೊಡ್ಡದು ಇದೆ. ತಾವು ಸ್ವಲ್ಪ ಪ್ರಾಕ್ಟಿಕಲ್ಲಾಗಿ ಸುತ್ತಮುತ್ತ ನೋಡಿ. ತಮಗೆ ಇದು ಗೊತ್ತಿದೆ. ಆದರೂ ತಪ್ಪ ಹೇಳುವುದಕ್ಕೆ ಹೊರಟಿದ್ದೀರಿ.

ಶ್ರೀ ಆರ್. ವೆಂಕಟರಾಮಯ್ಯ.—ಏನೋ ಒಂದು ಭಯ ಬಿದ್ದು ಹಾಗೆ ಅವರು ಹೇಳುತ್ತಿದ್ದಾರೆಯೇ ಹೊರತು, ಅವರೂ ನಮ್ಮ ಜೊತೆಯವರೇ ಕನ್ನಡಿಗರಿಗೆ ಕೆಲಸ ಕೊಡಬೇಕೆನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಆದೇ ಒಂದು ತಪ್ಪ ಮಾಡಿಕೊಂಡು ಬೇರೆಯವರು ಬರುವುದು ಬೇಡ ಎನ್ನುವುದು ರಾಜ್ಯಾಂಗಕ್ಕೆ ವಿರುದ್ಧವಾಗಿದೆ. ಆರ್ಟಿಕಲ್ ೧೬ ಕ್ಲಿಯರ್‌ಆಗಿದೆ. ಇಂತಹವರು ಬರಬಾರದೆಂದು ಹೇಳುವುದು ಸರಿಯಲ್ಲ. ಸರೋಜಿನಿ ಮಹಿಷಿಯವರ ವರದಿಯಲ್ಲಿ.....

ಅಧ್ಯಕ್ಷರು.—ಆ ವರದಿಯನ್ನು ನೋಡಿದ ಮೇಲೆ ತಾವು ಮಾತನಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಅಸ್ಸಾಮ್‌ನಲ್ಲಿ ಏನಾಯಿತು, ತ್ರಿಪುರಾ ಬಾರ್ಡರ್‌ನಲ್ಲಿ ಏನಾಗುತ್ತಿದೆ ಎಂಬುದು ನಿಮಗೆ ತಿಳಿದಿದೆ. ನಿಮ್ಮ ಮನೆಗೆ ಬಂದು ಆಕ್ರಮಣ ಮಾಡಿಕೊಂಡರೆ ಆಗಬಾರದ್ದು ಆಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಇವತ್ತು ಅಸ್ಸಾಮ್, ತ್ರಿಪುರಾಗಳ ಬಗ್ಗೆ ಮಾತನಾಡುವುದಾದರೆ ಇದು ದೊಡ್ಡ ಪುಟ್ಟದ ಚರ್ಚೆಯಾಗುತ್ತದೆ. ಜನಾಂಗದ ಪ್ರಶ್ನೆ ಹೇಗೆ ಬಂದಿದೆ, ಆ ಜನಾಂಗಕ್ಕೆ ಏನು ಅನುಕೂಲ ಮಾಡಿದ್ದಾರೆಂಬುದೆಲ್ಲಾ ಬರುತ್ತದೆ. ಇವತ್ತು ಬಂಡವಾಳಶಾಹಿಗಳು ಯಾರು ಇದ್ದಾರೆ ಅವರು ಈ ಬಗ್ಗೆ ಉತ್ತರವನ್ನು ಹೇಳಬೇಕಾಗುತ್ತದೆ. ಎಲ್ಲಿಯವರೆಗೆ ಬಂಡವಾಳಶಾಹಿ ಸಮಾಜ ಇರುತ್ತದೆ ಆಲ್ಲಿಯವರೆಗೆ ನಿರುದ್ಯೋಗ ಇರುತ್ತದೆ. ಮಹಿಷಿಯವರ ವರದಿಯಲ್ಲಿ ಇದೇನೂ ಇಲ್ಲ. ಬಂಡವಾಳಶಾಹಿಯನ್ನು ಇವತ್ತು ಕಿತ್ತುಹಾಕಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸ್ಥಳೀಯರಿಗೇ, ಕರ್ನಾಟಕದವರಿಗೇ ಹೆಚ್ಚಿನ ಪ್ರಾತಿನಿಧ್ಯವನ್ನು ವರದಿಯ ಪ್ರಕಾರ ಕೊಡಬೇಕೆಂದು ಮಾನ್ಯ ಮಂತ್ರಿಗಳು ಹೇಳಿದರು. ನಮ್ಮ ಸರೋಜಿನಿ ಮಹಿಷಿಯವರ ವರದಿ ಇನ್ನೂ ಬಂದಿಲ್ಲ. ಆದರೆ ನಮ್ಮ ಕಡೆ ಈಗಾಗಲೇ ಕೆಲವು ಬರುತ್ತಿದ್ದು ಆವುಗಳಲ್ಲಿ ಈಗಾಗಲೇ ನೇಮಕಾತಿಗಳು ಆಗುತ್ತಲಿವೆ. ಅಲ್ಲಿಗೆ ಈ ಬಗ್ಗೆ ಸರ್ಕಾರದಿಂದ ನೇರ ಆದೇಶ ಹೋಗಬೇಕು. ಆದೇಶ ಸರಿಯಾದ ವೇಳೆಯಲ್ಲಿ ಹೋಗದಿದ್ದರೆ ನೇಮಕಾತಿಗಳು ಮುಂಗಡು ಹೋಗುತ್ತವೆ. ನಮ್ಮಲ್ಲಿ Hindustan Lorex India Limited ಎಂಬ ಸಂಸ್ಥೆ ಇದ್ದು ಅದರಲ್ಲೂ ನೇಮಕಾತಿಗಳು ನಡೆದಿವೆ. ಆದರೆ ಸರೋಜಿನಿ ಮಹಿಷಿಯವರ ವರದಿ ಇನ್ನೂ ಬಂದಿಲ್ಲ. ಅವರು ಯಾವ ಯಾವ ವಿಷಯಗಳನ್ನು ಶಿಫಾರಸ್ಸು ಮಾಡಿದ್ದಾರೆ, ಹಾಗೂ ಏನೇನನ್ನು ಸರಿಪಡಿಸಬೇಕು ಎನ್ನುವ ವಿಷಯಗಳು ತಿಳಿಸಿದ್ದಾರೋ ಆದು ತಿಳಿದಿಲ್ಲ. ಇಲ್ಲಿ ಎನಾಗುತ್ತದೆ ಅಂದರೆ ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಲೋಕಲ್‌ನಲ್ಲಿರತಕ್ಕ ಅನ್‌ಸ್ಕಿಲ್ಡ್ ಸ್ಕಿಲ್ಡ್ ಲೇಬರರ್ಸ್‌ಗೆ ಅಪಾಯಿಂಟ್‌ಮೆಂಟ್ ಕೊಡದಿದ್ದರೆ ತೊಂದರೆಯಾಗುತ್ತದೆ. ಜನಗಳು ನಮ್ಮನ್ನು ಕೇಳುತ್ತಾರೆ, ನಮ್ಮಲ್ಲಿಗೆ ಬರುತ್ತಾರೆ. ಅವಕಾಶ ಬಂದಾಗ ನೀವು ಹೇಳಬೇಕು. ಸರ್ಕಾರದಿಂದ ಸವಲತ್ತುಗಳನ್ನು ತೆಗೆದುಕೊಂಡು ಅಪಾಯಿಂಟ್‌ಮೆಂಟ್‌ಗಳನ್ನು ಕೊಡದಿದ್ದರೆ ಹೇಗೆ ? ಅಪಾಯಿಂಟ್‌ಮೆಂಟ್ ಕೊಟ್ಟ ಮೇಲೆ ಪಿಗಿಯೂರಿಟಿ ಪ್ರಶ್ನೆ ಬರುತ್ತದೆ. ಪಿಗಿಯೂರಿಟಿ ಕೊಡದಿದ್ದರೆ ವ್ಯಕ್ತಿಗಳ ಗೌರವಕ್ಕೆ ಚ್ಯುತಿ ಬರುತ್ತದೆ. ಲೈಸನ್ಸ್ ಕೊಡತಕ್ಕ ಸಂದರ್ಭದಲ್ಲಿ ಇಂತಹ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ವರದಿ ಒತ್ತಟ್ಟಿಗೆ ಇರಲಿ. ಇಲ್ಲಿಯವರೆಗೆ ನೇಮಕಾತಿಗಳಲ್ಲಿ ಯಾವ ರೀತಿ ಸಹಾಯ ಮಾಡುತ್ತೀರಿ ಎನ್ನುವುದನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದೇ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗಲೇ ಕೇಳಿದರೆ ನಾವು ಏನು ಹೇಳಲಿ ? ಕೆಲವು ಸಂಘಟನೆ ಮಾಡುವುದು ಇದೆ. ಕೆಲವು ಕ್ಲಿಷ್ಟಕರವಾದ ಸಲಹೆಗಳು ಬಂದಿವೆ. ಕೆಲವು ಅಧಿಕಾರಿಗಳ ಮಟ್ಟದಲ್ಲಿ ಸಮೂಲೋಚನೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿದೆ. ನಾವು ಇನ್ನೂ ಫೈನಲೈಸ್ ಮಾಡಿಲ್ಲವೆ. ಕೂಡಲೇ ಮಾಡಿ ಎಂದರೆ ಹೇಗೆ ? ತಮ್ಮ ಸೂಚನೆಯನ್ನು ಗಮನದಲ್ಲಿಟ್ಟುಕೊಂಡಿದ್ದೇವೆ.

ಶ್ರೀ ಎಂ.ಎಸ್. ಪಾಟೀಲ್.—ಡಾ॥ಸರೋಜಿನಿ ಮಹಿಷಿಯವರ ಕಮಿಟಿಯನ್ನು ಎಷ್ಟು ದಿವಸ ಇಟ್ಟುಕೊಳ್ಳುತ್ತೀರಿ ? ಆ ಕಮಿಟಿಗೆ ಎಷ್ಟು ಮೆರ್ಮೊ ಬಂದಿದೆ ? ಎಷ್ಟು ಮೀಟಿಂಗ್‌ಗಳು ಆಗಿವೆ ? ನನ್ನ ಪ್ರಶ್ನೆಯನ್ನು ಬದಲಾವಣೆ ಮಾಡಲಾಗಿದೆ ಎಂದು ತಿಳಿದುಬಂತು. ಹಾಗಿದ್ದರೆ ನನ್ನ ಪ್ರಶ್ನೆಯ ಫೂನತೆ ಹೋಗುತ್ತದೆ.

ಉಪಾಧ್ಯಕ್ಷರು.—ನೀವು ರೂಲ್ ೬೮ರ ಪ್ರಕಾರ ಕನ್ಸರ್ಟ್ ಮಾಡಿ ಕೊಟ್ಟಿದ್ದೀರಿ. ಅದಕ್ಕೆ ಉತ್ತರ ಸಿಗುವುದಿಲ್ಲ. ತಾವು ಕುಳಿತುಕೊಳ್ಳಿ.